ಸ್ಥಾಪಕ ಪತ್ರಿಕೆ, ತಾರೀಖು 12ನೆ ಜನವರಿ 1907.

1906ನೆ ಇಸವಿಯ ಅಕ್ಟೋಬರು ತಿಂಗಳ ಇಂಡಿಯಾವಿನ ಅಗ್ರಿಕಲ್ಚರಲ್ ಜರ್ನಲ್ ಅಥವಾ ವ್ಯವಸಾಯ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ, ಪೂಸಾವಿನಲ್ಲಿರುವ ವ್ಯವಸಾಯ ಸಂಬಂಧವಾದ ಅನ್ವೇಷಣಶಾಲೆಯ ರಾಜಕೀಯ ಮಿಸ ಕಾಸ್ಟ್ರಜ್ಞರಾದ ಪಂಡಿತ ಇ. ಜೆ. ಬಟ್ಲರ್ ಎಂ. ಬಿ. ಎಫ್. ಎಲ್ ಎಸ್ ರವರ "ತೃಣದ್ರುಮಗಳ (ಅಡಕೆ, ತೆಂಗು ಮೊದಲಾದ ಮರಗಳ) ಕೆಲವು ರೋಗಗಳ" ವಿಷಯವಾದ ಉಪಾಖ್ಯಾನದಿಂದ ಎತ್ತಿ ಬರೆದ ಈ ಕೆಳಗೆ ಕಂಡ ಕೊಳೆ ರೋಗದ ವಿವರಣೆಯನ್ನು ಸರ್ವ ಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿದೆ. ಇಷ್ಟ ವಿರುವವರು ಈ ವಿಷಯವನ್ನು ಚರ್ಚಿಸಬಹುದೆಂದು ಕೋರಿ ಇದೆ.

ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರದ ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸೆಕ್ರಿಟರಿ.

ತೃಣದ್ರುಮಗಳ ಕೆಲವು ರೋಗಗಳು.

ಪೂಸಾವಿನ ವ್ಯವಸಾಯ ಸಂಬಂಧವಾದ ಅನ್ವೇಷಣ ಶಾಲೆಯ ರಾಜಕೀಯ ಮಿಸ ಕಾಸ್ಟ್ರಜ್ಞರಾದ

ಇ. ಜೆ. ಬಟ್ಲರ್, ಎಂ. ಬಿ. ಎಫ್. ಎಲ್. ಎಸ್ ರವರಿಂದ.

ಅಮನೆ ವೃತ್ತಗಳೊಳಗಿರುವ ದೇಶಗಳ ಎಂದರೆ ಉಷ್ಣ ದೇಶಗಳ ಜನಗಳಿಗೆ ತೃಣದ್ರುಮಗಳಿಂದುಂಟಾಗುವ ಅಸಾಧಾರಣವಾದ ಪ್ರಯೋಜನವನ್ನು ನಾವು ಯೋಚಿಸಿದರೆ ತೃಣದ್ರುಮಗಳಲ್ಲಿ ಮಿಸಿಯು (ನಾಯಿಕೊಡೆ, ಬೂಜು ಮುಂತಾದುವು) ರೋಗಗಳು ಅಪರೂಪವಾಗಿರುವುದು ಭಾಗ್ಯವಾದ ವಿಷಯವಾಗಿದೆ. ಈಚಿನ ವರ್ಷಗಳಲ್ಲಿ ಇಂಡಿಯಾವಿನಲ್ಲಿ ಕೆಲವು ರೋಗಗಳು ಕಾಣಿಸಿಕೊಂಡಿದ್ದರಲ್ಲಿ ಪ್ರತಿ ರೋಗವೂ ದೇಶದ ಒಂದೊಂದು ಭಾಗಕ್ಕೆ ಮಾತ್ರ ವ್ಯಾಪಿಸಿದಂತೆ ತೋರುತ್ತದೆ ಮತ್ತು ಅವು ಬೇರೆ ಬೇರೆ ಕಾರಣಗಳಿಂದ ಹುಟ್ಟಿದ್ದಾಗ್ಯೂ ಸಾಮಾನ್ಯವಾದ ಫಲಿತಾಂಶದಲ್ಲಿ ವಿಕರೀತಿಯಾಗಿಯೇ ಇದ್ದವು.

ಅಡಕೆ ಮರಗಳ ಕೊಳೆ ರೋಗ.

ಮೈಸೂರು ಸೀನೆಯ ಮಲೆನಾಡು ಜಿಲ್ಲೆಗಳಲ್ಲಿ ತತ್ಕಾಪಿ ಕೊಪ್ಪದ ಹತ್ತಿರ ಅಡಕೆ ಮರಗಳಿಗೆ ಬಂದು ರೋಗವು ಬರುವಂತೆ ಅನೇಕ ವರ್ಷಗಳಿಂದ ತಿಳಿದಿತ್ತು. ಆ ಸ್ಥಳಗಳಲ್ಲಿ ಜನರು ಅದನ್ನು "ಕೊಳೆ ರೋಗ" ಅಥವಾ ಕಪ್ಪುರೋಗ ವೆಂದು ಕರೆಯುತ್ತಾರೆ. ಇದುವರೆಗೆ ಅದು ಇನ್ನೆಲ್ಲಿಯೂ ಕಾಣಿಸಿಕೊಳ್ಳದೆಯೂ, ಮತ್ತು ಇದುವರೆಗೆ ನೋಡಿದ್ದರಲ್ಲಿ ಬಹಳವಾಗಿ ಹರಡಿಕೊಳ್ಳುವಂತೆ ತೋರದೆಯೂ ಇರುವುದರಿಂದ ಅದು ಹುಟ್ಟುವ ಸ್ಥಳದ ವಿಶೇಷವಾದ ವಾಯುವಿನ ಸ್ಥಿತಿಗಳು ಅದಕ್ಕೆ ಪ್ರಾಯಶಃ ಅನುಕೂಲವಾಗಿರಬಹುದು.

ರೋಗದ ಪ್ರಥಮ ಚಿನ್ಹೆಯು ಹೂವು ಬಿಡುವ ಕಾಲವಲ್ಲಿ ಕಾಣಿಸಿಕೊಳ್ಳುತ್ತದೆ. ಕಾಯಾಗದೆ ಕೆಲವು ಹೂವುಗಳು ಬೆದ್ದು ಹೋಗಿ ಅವುಗಳ ತೊಟ್ಟುಗಳು ಕಪ್ಪಾಗಿ ಕೊಳೆತ್ತುಹೋಗುತ್ತವೆ. ಈ ರೋಗವು ಕ್ರಮವಾಗಿ ಹೂವುಗಳಿಗೆಲ್ಲಾ ವ್ಯಾಪಿಸಿ ಅಡಕೆ ಕಾಯಿ ಆಗುತ್ತಿರುವ ತೊಟ್ಟುಗಳಿಗೂ ಹೆಗುಲಿ ಕಾಯಿಗಳು ಎಳೆಕಾಗಿರುವಾಗಲೇ ಉದುರಿಹೋಗುವಂತೆ ಮಾಡುತ್ತದೆ. ಅನೇಕ ವೇಳೆ ಕೇಡು ಇಷ್ಟಕ್ಕೇ ನಿಲ್ಲುವುದಿಲ್ಲ. ಹೂವಿನ ತೊಟ್ಟು ಎಲ್ಲಾದಕ್ಕಿಂತ ಕೆಳಗಿನ ಗರಿಯ ಬುಡದಿಂದ ಹುಟ್ಟುವುದರಿಂದ ಮರದ ತಲೆಯಲ್ಲಿ ಹಸುರಾಗಿ ಉಬ್ಬಿ ಕೊಂಡಿರುವ ಭಾಗದ ಅಥವಾ ತೊಂಡೆಯ ಬುಡಕ್ಕೆ ನೆಟ್ಟಗೆ ಹೋಗುತ್ತದೆ. ಈ ಹಸುರಾದ ಭಾಗದಲ್ಲಿರುವ ಹಾಳೆಗಳು ಅಥವಾ ಪಟ್ಟೆಗಳು ಬೆಳೆಯುವ ಸುಳಿಯನ್ನು ಸುತ್ತಲೂ ಮುಚ್ಚಿಕೊಂಡು ಕಾಪಾಡುವ ಹೊದಿಕೆಯಾಗಿವೆ. ಈ ಪಟ್ಟೆಗಳ ಪೈಕಿ ಎಲ್ಲಾದಕ್ಕಿಂತ ಕೆಳಗಿರುವ ಪಟ್ಟೆಗೆ ಹೂವಿನ ತೊಟ್ಟು ಅಥವಾ ಹೊಂಬಾಳೆ ಹುಟ್ಟುವ ಸ್ಥಳದ ಹತ್ತಿರ ಜಾಡ್ಯ ತಗುಲಿ ಅಲ್ಲಿ ರೋಗದ ಮಚ್ಚೆಯು ಕಾಣಿಸಿಕೊಳ್ಳುತ್ತದೆ. ಆಗ ಅದರ ಒಳಗಿರುವ ಪಟ್ಟೆಗಳಿಗೂ ಜಾಡ್ಯ ತಗುಲಿ ಬಳಗಿನ ಭಾಗಗಳು ಮೇಲಿನ ಭಾಗಕ್ಕಿಂತ ವ್ಯಧುತರವಾಗಿರುವುದರಿಂದ ರೋಗವು ಹರಡಿಕೊಂಡು ಸುಳಿಗೂ ತ್ವರೆಯಾಗಿ ವ್ಯಾಪಿಸುತ್ತದೆ. ಸುಳಿಗೆ ರೋಗ ತಗುಲಿದ ಕೂಡಲೇ ಅದು ನಾಶವಾಗಿ ಮರದ ತಲೆಯಲ್ಲಾ ಬಾಡಿ ಬೆದ್ದುಹೋಗುತ್ತದೆ. ಮರದ ಬೆಳೆ ಮಾತ್ರ ಹೋಗುವುದಲ್ಲದೆ ನುರವೆಲ್ಲಾ ಸಾಯುವುದರಿಂದ ರೋಗ ತಗುಲಿದ ಪ್ರಾಂತ್ಯಗಳಲ್ಲಿ ಬಹಳ ನಷ್ಟ ಉಂಟಾಗುತ್ತದೆ.

ಪಟ್ಟೆಗಳ ಅಥವಾ ಹಾಳೆಗಳ ರೋಗದ ಮಚ್ಚೆಗಳಲ್ಲಿಯೂ ಬಾಡಿಹೋದ ಕಾಯಿನ ತೊಟ್ಟುಗಳಲ್ಲಿಯೂ ಫೈತಾಫ್ತೋರಾ ಎಂಬ ಜಾತಿಯ ವಿಷ ಸಸ್ಯಾಣುವು ಇರುತ್ತದೆ. ಇದೇ ರೋಗಕ್ಕೆ ಕಾರಣವೆಂಬುದಕ್ಕೆ ಸಂದೇಹವಿಲ್ಲ. ಕೆಲವು ಜಾತಿಯವಾಗಿರುವ ಫೈತಾಫ್ತೋರಾ ಎಂಬುವೆಲ್ಲವೂ ಕೆಟ್ಟ ಅಣುಬಂದಣಿಕೆ [=ಬದನಿಕೆ, ಬದಿನಿಕೆ, ಬಂದಳಿಕೆ, ಬುಂದುರಿಕ, ಬಾಂದುರಿಕೆ, ಬಂದರಿಗೆ, ವನ್ಪಿಕ್ಕೆ (ಸಂಸ್ಕೃತ ಜೀವಂತಿಕೆ, ವೃಕ್ಷವೆರುಕೆ, ವಂದೆ, ವೃಕ್ಷಾಂದಿನಿ,) ಗಳಾಗಿವೆ. ಉರಳಗಡ್ಡೆಯು ಜಾಡ್ಯಕ್ಕೆ ಕಾರಣವಾಗಿರುವ ಪ್ರಸಿದ್ಧವಾದ ಫೈತಾಫ್ತೋರಾ ಇಫೆಸ್ಟಾನ್ಸ್ ಎಂಬ ಅಣುಬಂದಣಿಕೆಯನ್ನು ಜಣಗಿದ ಸಸ್ಯ ಪದಾರ್ಥಗಳ ಮೇಲೆ ಬೆಳೆಸಿ ಇದ್ದಾಗ್ಯೂ ಅದರ ಬೆಳವಣಿಗೆಯು ಬದುಕಿರುವ ಸಸ್ಯ ಪದಾರ್ಥದ ಮೇಲೆ ಇದ್ದಷ್ಟು ಪ್ರಬಲವಾಗಿ ಇರುವುದಿಲ್ಲ. ಅಡಕೆಯ ಮರದ ಫೈತಾಫ್ತೋರಾ ಎಂಬ ವಿಷದ ಅಣುಬಂದಣಿಕೆಯು ಅದರ ಸ್ಥಾನದಿಂದಲೂ ಅದರ ಸಂವಿಧಾನದ ಗುಣದಿಂದಲೂ ಅದು ಉತ್ಪತ್ತಿ ಮಾಡುವ ಅಪರಿವಿತೆವಾದ ಬೀಜಗಳಿಂದಲೂ ಜಾಡ್ಯಕಾರಿ ಅಣುಬಂದಣಿಕೆಯಾಗಿ ತೋರುತ್ತದೆ.

ಈ ವಿಷಯದಲ್ಲಿ ಅಣುಮಿಸಿ ಅಥವಾ ಅಡಕೆ ಮರದ ಮೈಯಲ್ಲಿ ಬೆಳೆದು ಮೇಲ್ಭಾಗಕ್ಕೆ ವಿಸ್ತರಿಸಿಕೊಳ್ಳುವ ಬಂದು ಭಾಗವೂ ಆ ಅಣುಮಿಸಿಯ ಮೇಲ್ಭಾಗದ ಪರೆಗಳಲ್ಲಿ ಮಾತ್ರವೇ ಉಂಟಾಗುವ ಮುಂದಕ್ಕೆ ಬೀಜಗಳನ್ನು ಹುಟ್ಟಿಸುವ ಅಣುಬೀಜ ಕೋಶಗಳುಳ್ಳ ಮತ್ತೊಂದು ಭಾಗವೂ ಇವೆ. ಈ ಒಳ ಭಾಗದಲ್ಲಿ ಅಣುಕೋಶಗಳ ನಡುವೆ ಬಣ್ಣವಿಲ್ಲದೆ ದಾರದಾಗಿರುವ ವಸ್ತುಗಳು ಇವೆ. ಅಲ್ಲಲ್ಲಿ ಈ ಪರೆಗಳು ಗಿಡದ ಹೊರಭಾಗವನ್ನು ಸೀಳಿ ಕವಲುಗಳುಳ್ಳ ಸಣ್ಣ ದಾರಪರೆಗಳಹಾಗೆ ಬೆಳೆಯುತ್ತವೆ. ಇವುಗಳ ಕೊನೆಗಳಲ್ಲಿದೆಯೂ ಮತ್ತು ಪಾರ್ಶ್ವದಿಂದ ಹೊರಟ ಸಣ್ಣ ಕೊಟ್ಟುಗಳಲ್ಲಿಯೂ ಅಣುಬೀಜ ಕೋಶಗಳು ಹುಟ್ಟುತ್ತವೆ. ಅವು ವೇರ್ ಯೆ ಬೀರಿಜಿಸ್ಪೋನ ಅಥವಾ ಬುಗುರಿಯ ಆಕಾರವುಳ್ಳವುಗಳಾಗಿವೆ. ಅವುಗಳು ಅವುಗಳ ಅಗಲವಾದ ಕೊನೆಯಲ್ಲಿ ತೊಟ್ಟುಗಳಂಟಿಕೊಂಡಿದ್ದು ಆದರಿಂದ ಸುಲಭವಾಗಿ ಬಿದ್ದುಹೋಗುತ್ತವೆ. ಅವು ನೀರಿನಲ್ಲಿ ತ್ವರೆಯಾಗಿ ಮೊಳೆತು ಬಂದೊಂದೂ ಹನ್ನೆರಡು ಅಥವಾ ಅಧಿಕವಾದ ನೀರಿನಲ್ಲಿ ಈಜುವ ಅಣುಬೀಜಗಳನ್ನು ಹುಟ್ಟಿಸುತ್ತವೆ. ಅವು ನಾನಾ ರೀತ್ಯಾ ಈಜಿ ಸ್ವಲ್ಪ ಕಾಲ

ದ ತರುವಾಯ ಬಂದು ಈಡೆನಿಂತು ಜೆನ್ನಾಗಿ ಗುಂಡುತಿರಿಗಿ ಪುನಃ ಬಂದು ದಾರವನ್ನು ಹುಟ್ಟಿಸುವುದರ ಮೂಲಕ ತಿರಿಗಿ ಮೊಳೆಯುತ್ತವೆ. ಈ ಅಣುಬೀಜ ಕೋಶಗಳ ಮತ್ತು ಅಣುಬೀಜಗಳ ಮೂಲಕವಾಗಿಯೇ ರೋಗವು ಹರಡಿಕೊಳ್ಳುತ್ತದೆ.

ಈ ಫೈತಾಫ್ತೋರಾ ಅಣುಬೀಜ ಕೋಶಗಳು ಸರಿಯಾಗಿ ಮೊಳೆಯುವುದಕ್ಕೆ ಅವು ನೀರಿನಲ್ಲಿ ಬೀಳಬೇಕಾಗಿರುವುದರಿಂದ ಪ್ರಾಯಃ ಅವುಗಳಿಂದ ಉಂಟಾಗುವ ರೋಗಗಳೆಲ್ಲಾ ತೇವದ ಮತ್ತು ಮಳೆಯ ಸ್ಥಿತಿಗಳನ್ನು ಬಹಳವಾಗಿ ಆಶ್ರಯಿಸಿ ಇವೆ. ಹೂವಿನಲ್ಲಿಯೂ ಕಾಯಿನ ತೊಟ್ಟುಗಳಲ್ಲಿಯೂ ಆರಂಭಿಸುವ ಹಾಗೆ ತೋರುವ ಅಡಕೆ ಮರದ ರೋಗವು ಹರಡಿಕೊಳ್ಳುವುದಕ್ಕೆ ಕಾಯಿ ಬಿಡುವ ಕಾಲದಲ್ಲಿ ತೇವದ ಸ್ಥಿತಿಯು ಅನುಕೂಲವಾಗಿರುವುದು ಅವಶ್ಯವಾಗಿದೆ. ಮೈಸೂರು ಸೀಮೆಯು ಈ ಭಾಗಗಳಲ್ಲಿ ಭಾರಿ ಮಳೆಗಳು ಜೂನ್ ತಿಂಗಳಲ್ಲಿ ಪ್ರಾರಂಭವಾಗಿ ಆಗಸ್ಟ್ ಅಥವಾ ಸೆಪ್ಟಂಬರು ಕೊನೆಯ ವರೆಗೂ ನಡೆಯುತ್ತವೆ. ಈ ಕೆಳಗಿನ ಮಾತುಗಳು ಈಚಿನ ವರ್ಷಗಳಲ್ಲಿ ರೋಗದ ತೀವ್ರತೆಯ ಹೆಚ್ಚನ್ನೂ ಅದು ಒಂದೇ ಪ್ರದೇಶಕ್ಕೆ ಮಾತ್ರ ತಗುಲಿಕೊಂಡಿರುವುದನ್ನೂ ವಿವರಿಸಬಹುದು.

ಮೂವತ್ತು ನಲವತ್ತು ವರ್ಷಗಳ ಹಿಂದೆ ರೋಗವು ಮೊದಲು ನಲ ಕಾಣಿಸಿಕೊಂಡಾಗ ನವೆಂಬರು ಅಥವಾ ಡಿಸೆಂಬರು ತಿಂಗಳಲ್ಲಿ ಕಾಯಿಗಳನ್ನು ಕೊಯ್ಯುವ ಪದ್ಧತಿಯಿತ್ತು. ಈಚಿನ ಇಪ್ಪತ್ತು ವರ್ಷಗಳಿಂದ ಕೊಯ್ಲಲು ಇನ್ನೂ ಮುಂಚೆಯೇ ಎಂದರೆ ಕೆಲವು ವೇಳೆಗಳಲ್ಲಿ ಜುಲೈ ಅಥವಾ ಆಗಸ್ಟ್ಗಿನಷ್ಟು ತ್ವರೆಯಾಗಿ ಆಗುತ್ತದೆ. ಪುರಕ್ಕೆ ಬೀರೆ ವಿಧವಾಗಿ ವ್ಯವಸಾಯ ಮಾಡುವುದರಿಂದ ಅಥವಾ ಮುಂಚಾಗಿ ಫಲ ಬಿಡುವಂಥಾ ಜಾತಿಯ ವೃಕ್ಷವನ್ನು ತಂದುಹಾಕಿರುವುದರಿಂದ ಮರದ ಪ್ರಕೃತಿಯು ಬದಲಾಯಿಸಿದಂತೆ ಕಾಣುತ್ತದೆ. ಈ ಕಾರಣದಿಂದ ತೇವದ ಸ್ಥಿತಿಯು ರೋಗ ಪ್ರಬಲಿಸುವುದಕ್ಕೆ ಅನುಕೂಲವಾಗಿರುವ ಕಾಲದಲ್ಲಿ ಕಾಯಿಗಳ ತೊಟ್ಟುಗಳು ರೋಗ ತಗಲುವುದಕ್ಕೆ ಗುರಿಯಾಗುತ್ತವೆ. ಕೆಲವು ತೋಟಗಳಲ್ಲಿ ಈಗಲೂ ಡಿಸೆಂಬರ್ ತಿಂಗಳಲ್ಲಿ ಪೈರು ಸ್ವಲ್ಪವಾಗುವುದರಿಂದ ಅಲ್ಲಿ ಈ ರೋಗದಿಂದ ನಷ್ಟ ಉಂಟಾಗಿಲ್ಲವೆಂದು ತಿಳಿಯಬಂದಿದೆ. ಡಿಸೆಂಬರು ವತ್ತು ಜನವರಿ ತಿಂಗಳಲ್ಲಿ ಪೈರು ಕೊಯ್ಯಲಾಗುವ ಮೈಸೂರು ಸೀಮೆಯ ವ್ಯಾಪ್ತಿಗೆರೆ ಮತ್ತು ಅದರ ನೆರೆಹೊರೆಯ ಪ್ರದೇಶಗಳಲ್ಲಿ ಜಾಡ್ಯ ಹಿಡಿದಿರುವಂತೆ ಕಾಣುವುದಿಲ್ಲ. ಹಾಗೆಯೇ ಘಟ್ಟದ ಸಮೀಪದಲ್ಲಿರುವ ಪ್ರದೇಶದಲ್ಲಿ ಬಹಳ ಭಾರಿ ಮಳೆ ಬಿದ್ದಾಗ್ಯೂ ಅನೇಕ ಸ್ಥಳಗಳಲ್ಲಿ ಕೊಪ್ಪದಲ್ಲಿ ಕೊಯ್ಲಾದಮೇಲೆ ಪೈರು ಕೊಯ್ಯಲಾಗುವುದರಿಂದ ಇಲ್ಲಿಯೂ ಜಾಡ್ಯ ಕಾಣಿಸಿಕೊಂಡಂತೆ ತಿಳಿಯಬಂದಿಲ್ಲ. ಅಡಕೆಯು ಪಕ್ವವಾಗುವ ಅಥವಾ ಹದಕ್ಕೆ ಬರುವ ಕಾಲದಲ್ಲಿ ಮಳೆ ಬೀಳುವುದರ ದುರ್ಗುಣಗಳು ವ್ಯವಸಾಯಗಾರರಿಗೇ ತಿಳಿದಿವೆ. ಕೊಪ್ಪದಲ್ಲಿ ಮಳೆಯಿಂದ ಅಡಕೆ ಗೊನೆಗಳನ್ನು ಕಾಪಾಡುವುದಕ್ಕೆ ಒಂದು ವಿಶೇಷವಾದ ಉಪಾಯವನ್ನು ಕಲ್ಪಿಸಿ ಇದಾರೆ. ಮಳೆ ಪ್ರಾರಂಭಿಸುವುದಕ್ಕೆ ಮುಂಚೆ ಪ್ರತಿ ಗೊನೆಯನ್ನೂ ಎಲೆಗಳಿಂದ ಅಥವಾ ಅಡಕೆ ಮರದ ಹೊಂಬಾಳೆ ಪಟ್ಟೆಯಿಂದ ಅಥವಾ ಹಾಳೆಯಿಂದ ಮಾಡಿದ ಬಂದು ಹೊದಿಕೆಯಿಂದ ಮುಚ್ಚುತ್ತಾರೆ (ಅಥವಾ ಕೊಟ್ಟೆಕಟ್ಟುತ್ತಾರೆ). ಈ ಪದ್ಧತಿಯಿಂದ ಬಹಳ ಪ್ರಯೋಜನ ಉಂಟಾದಂತೆ ತಿಳಿಯಬಂದಿದೆ.

ರೋಗವು ಹರಡಿಕೊಳ್ಳದಂತೆ ಅಡ್ಡಿಮಾಡುವುದಕ್ಕೆ ಪ್ರಯತ್ನಿಸುವುದರಲ್ಲಿ ಎರಡು ವಿಷಯಗಳನ್ನು ಲಕ್ಷ್ಯದಲ್ಲಿ ಇಡಬೇಕು. ಮೊದಲನೆಯದು ಯಾವುದೆಂದರೆ ಸಾಧ್ಯವಾದಲ್ಲಿ ಹಿಂದಿನ ವರ್ಷಗಳಲ್ಲಿ ಮಾಡುತ್ತಿದ್ದಂತೆ ತಡವಾಗಿ ಕಟಾವ್ಪ ಮಾಡುವ ಪದ್ಧತಿಯನ್ನು ಪುನಃ ಅನುಸರಿಸುವುದು. ಅಡಕೆ ತೋಟಗಳಲ್ಲಿ ಈಗ ಉಪಯೋಗದಲ್ಲಿರುವ ವ್ಯವಸಾಯದ ವಿಧಾನಗಳನ್ನು ಬದಲಾಯಿಸುವುದರಿಂದ ಹೀಗೆ ಮಾಡಲು ಸಾಧ್ಯವಾಗಬಹುದು. ಇದು ಸಾಧ್ಯವೇ ಎಂದು ತಿಳಿದುಕೊಳ್ಳುವುದಕ್ಕಾಗಿ ನಮ್ಮ ಕೈಯೆಲ್ಲಿ ಆದುದಕ್ಕಿಂತ ಬಹಳ ಹೆಚ್ಚು ವಿಚಾರಣೆಯು ಅವಶ್ಯವಾಗಿದೆ. ಈಗ ಅನೇಕ ಸ್ಥಳಗಳಲ್ಲಿ ಅಡಕೆ ವರಗಳಿಗೆ ಆರು ಅಂಗುಲ ಆಳದ ಜಿಗಳು ಅಥವಾ ಕಾಲು ಹೊಡದು ಅದಕ್ಕೆ ದನವಿನ ಗೊಬ್ಬರವನ್ನು ತುಂಬಿ ಮರಗಳ ಬುಡದ ಸುತ್ತಲೂ ಅರ್ಧ ಕೊಳೆತುಹೋದ ಎಲೆಗಳು ಹೊಸಮಣ್ಣು ಮುಂತಾದುವನ್ನು ಹಾಕುತ್ತಾರೆ. ಬಲಾತ್ಕಾರದಿಂದ ಫಲ ಬಿಡುವಂತೆ ಮಾಡುವ ಈ ವ್ಯವಸಾಯವನ್ನು ಕೆಡವಿ ಮಾಡುವುದರಿಂದ ಸೈರಾಗುವುದು ತಡವಾಗಬಹುದು. ಈ ಅಂಶವನ್ನೂ ರೋಗ ಹರಡಿಕೊಳ್ಳದಂತೆ ಅಡ್ಡಿ ಮಾಡುವುದಕ್ಕೆ ನಿಜವಾಗಿ ಎಷ್ಟುವಟ್ಟಿಗೆ ಅದು ಫಲಕಾರಿಯಾಗುವುದೆಂಬುವುದನ್ನೂ ನಿಶ್ಚಯಿಸುವುದಕ್ಕೆ ಪರೀಕ್ಷೆಗಳು ಅವಶ್ಯವಾಗಿವೆ. ತಡವಾಗಿ ಫಲಬಿಡುವ ಜಾತಿಯ ಅಡಕೆ ಮರಗಳು ಯಾವುವಾದರೂ ಇವೆಯೇ ಎಂದೂ ಕೂಡ ಹುಡುಕಬೇಕು.

ಗೊನೆಗಳಿಗೆ ಮುಚ್ಚಳ ಪದಕ್ಕಾಗಿ ಉಪಯೋಗಿಸುವ ಹೊದಿಕೆಗಳನ್ನು ಅಥವಾ ಕೊಟ್ಟೆಗಳನ್ನು ಅಭಿವೃದ್ಧಿಪಡಿಸುವುದು ಜಾಡ್ಯ ಬಾರದಂತೆ ಅಡ್ಡಿ ಮಾಡುವುದಕ್ಕೆ ಮತ್ತೊಂದು ವಿಶೇಷ ಕಾರ್ಯಸಾಧಕವಾದ ವಿಧಾನವಾಗಿದೆ. ಈಗ ಉಪಯೋಗದಲ್ಲಿರುವ ಹೊದಿಕೆಗಳು ಮುಚ್ಚಳಗಳು ಯಾ ಕೊಟ್ಟೆಗಳು ತೃಪ್ತಿಕರವಾಗಿಲ್ಲ. ಅವು ಬಿಸಿಲುಕಾಯುವಾಗ ಬಿಗಿಯಾಗಿ ಬಿರುಕ್ಕುಬಿಟ್ಟು, ಮಳೆ ಒಂದೇ ಸ್ವನ್ನುನಾಗಿ ಬಹಳ ತಿಲ ಹಿಡಿದುಕೊಂಡಾಗ ಕೊಳೆತುಹೋಗಿ ತುಂಡುತುಂಡಾಗಿ ಬಿದ್ದುಹೋಗುತ್ತವೆ. ಮಳೆ ಪ್ರಾರಂಭವಾದಕ್ಕೂ ಮೊದಲೆ ಅವುಗಳನ್ನು ಗೊನೆಗಳಮೇಲೆ ಕಟ್ಟುವುದರಿಂದ ಉಂಟಾಗುವ ನೆರೆಳಿನಿಂದ ಏನೂ ಕೆಡಕ್ಕೂ ಉಂಟಾಗುವಹಾಗೆ ತೋರಲಿಲ್ಲ. ಹೊದಿಕೆಗಳೇ ಇಲ್ಲದೆ ಇರುವುದಕ್ಕಿಂತ ಬಡಕಾಗಿ ಸೋಗೆಯ ಹೊದಿಕೆ (ಅಥವಾ ಕೊಟ್ಟೆ) ಗಳಿಂದ ಕೇಡು ಇನ್ನೂ ಹೆಚ್ಚಾಗಬಹುದು. ಏತಕ್ಕೆಂದರೆ ಅವು ತೇವ ಆರದಕ್ಕೂ ಗಾಳಿಯಾಡುವುದಕ್ಕೂ ಅಡ್ಡಿಯಾಗಿ ಮಿಸಿಯು ಬೆಳೆಯುವುದಕ್ಕೆ ಅನುಕೂಲವಾಗುವಂತೆ ಗೊನೆಗಳನ್ನು ಸುತ್ತಲೂ ತೇವದಗಾಳಿ ಇರುವಂತೆ ಮಾಡುತ್ತವೆ. ತಗರದ ತಂಡಿನಿಂದ ಮಾಡಿದ ಹೊದಿಕೆಗಳನ್ನು (ಅಥವಾ ಕೊಟ್ಟೆಗಳನ್ನು) ಉಪಯೋಗಿಸುವುದು ಬಳ್ಳಿ ಸ್ಥಿತಿಯಲ್ಲಿರುವ ತೋಟಗಾರರ ಶಕ್ತಿಗೆ ಮೀರಿ ಇರಲಾರದು. ಮತ್ತು ಈ ತಗರದ ಹೊದಿಕೆಗಳು ಅಡಕೆಹಾಳೆಯಿಂದ ಮಾಡಿದವುಗಳಿಗಿಂತ ಬಹಳ ಹೆಚ್ಚಾಗಿ ಕಾರ್ಯಸಾಧಕವಾದುವುಗಳಾಗಿರುವುವು. ಕೊಪ್ಪದ ಒಬ್ಬ ವಿದ್ಯಾವಂತನಾದ ರೈತನು ಸಣ್ಣದ ಮುಚ್ಚಳ ಅಥವಾ ಕೊಟ್ಟೆಗಳನ್ನು ಮುಚ್ಚಿ ತಾನು ಪರೀಕ್ಷೆಮಾಡಿ ನೋಡಿದ್ದರಲ್ಲಿ ಬಹಳ ಒಳ್ಳೆಯದಾಗಿ ಕಂಡುಬಂತೆಂದೂ ಹಾಗೆ ಮುಚ್ಚಿದ ಕಾಯಿಗಳು ಜೆನ್ನಾಗಿ ಇದ್ದವೆಂದೂ ಮುಚ್ಚದೆ ಇದ್ದವು ಕೊಳೆತುಹೋದುವೆಂದೂ ನಮಗೆ ತಿಳಿಸಿದನು. ತಗರದ ಮುಚ್ಚಳಗಳು ಅಥವಾ ಕೊಟ್ಟೆಗಳು ಕೆಲವು ವರ್ಷಗಳು ನಿಲ್ಲುತ್ತವೆ ಮತ್ತು ಸಾಕಾದಷ್ಟು ಬಹಳವಾಗಿ ಮುಚ್ಚಳಗಳನ್ನು ತಯಾರ್ಮಾಡಿಸಿದರೆ ಅ ಗ್ರ ಖರ್ಚು ಸಾಧಾರಣವಾದ ಅಡಕೆ ತೋಟಗಾರನ ಶಕ್ತಿಗೆ ಮೀರಲಾರದು, ಮತ್ತು ಬಹುಶಃ ಅನೇಕರ ಬೆಲೆಯು ಒಂದೇ ವರ್ಷದಲ್ಲಿ ಹುಟ್ಟಿಬಹುದು. ರೋಗ ತಗುಲಿದ ಪ್ರದೇಶಗಳಲ್ಲಿ ಎಲೆಯ (ಅಥವಾ ಹಾಳೆಯ) ಹೊದಿಕೆಗಳಿಗೆ (ಅಥವಾ ಕೊಟ್ಟೆಗಳಿಗೆ) ಬದಲಾಗಿ ತಗರದವುಗಳನ್ನು ಉಪಯೋಗಕ್ಕೆ ತರಲು ಪ್ರಯತ್ನಮಾಡಿದರೆ ಪ್ರಯೋಜನ ಪಡೆಯಬಹುದು.

Govt. Press, Bangalore—1907.